## ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 653 |
| ಮಾನ್ಯ ಸದಸ್ಯರ ಹೆಸರು | ಡಾ: ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 18.08.2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಹೃದಯಾಘಾತದಿಂದ ಕಳೆದ 5 ವರ್ಷಗಳಲ್ಲಿ ಮೃತ ಪಟ್ಟವರ ಸಂಖ್ಯೆ ಎಷ್ಟು; (ಜಿಲ್ಲಾವಾರು, ವರ್ಷಾವಾರು ವಿವರ ನೀಡುವುದು) | 2022-23ನೇ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ STEMI ಕಾರ್ಯಕ್ರಮವನ್ನು ಮಾರ್ಚ್ 2023 ರಿಂದ ಪ್ರಾರಂಭಿಸಲಾಗಿರುತ್ತದೆ. 2023-24ನೇ ಸಾಲಿನಲ್ಲಿ ಎರಡನೇ ಹಂತವನ್ನು ಆಯವ್ಯಯ ಭಾಷಣದ ಕಂಡಿಕೆ 115ರಲ್ಲಿ ಘೋಷಿಸಿದಂತೆ ಡಾ. ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆಯನ್ನು ಪ್ರಾರಂಭಿಸಲಾಗಿರುತ್ತದೆ. ಅಂತೆಯೇ 2023 ಮಾರ್ಚ ನಂತರ ಹೃದಯ ಸಂಬಂಧಿ ಕಾಯಿಲೆಗಳು ಮತ್ತು ಮರಣ ಪ್ರಕರಣಗಳನ್ನು ವಿಶೇಷ ಪ್ರಕರಣಗಳಲ್ಲಿ ವರದಿ ಮಾಡಿಕೊಳ್ಳಲಾಗುತ್ತಿದೆ. ಆದ್ದರಿಂದ ಕಳೆದ ಮೂರು ವರ್ಷಗಳ ಪ್ರಕರಣಗಳ ವರದಿಯನ್ನು ಸಲ್ಲಿಸಲಾಗಿರುತ್ತದೆ.<br><br>ಮಾರ್ಚ್- 2023 ರಿಂದ ಜುಲೈ 2025 ರ ಅಂತ್ಯದ ವರೆವಿಗೂ ಹೃದಯಾಘಾತದಿಂದ ಮೃತಪಟ್ಟವರ ಜಿಲ್ಲಾವಾರು ಮತ್ತು ವರ್ಷಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಕಳೆದು 3 ವರ್ಷದಲ್ಲಿ ಹೃದಯಾಘಾತ ಸಂಭವಿಸಿರುವ ಪ್ರಕರಣಗಳ ಸಂಖ್ಯೆ 61299 ಇದರಲ್ಲಿ 45 ವರ್ಷಕಿಂತ ಕಡಿಮೆ ವಯಸ್ಸಿನವರಲ್ಲಿ ಹಠಾತ್ ಹೃದಯಾಘಾತದಿಂದ ಮೃತಪಟ್ಟವರ ಸಂಖ್ಯೆ 472 ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯು ತಿಳಿಸಿದೆ. |
| ಆ | ತುಮಕೂರು ಜಿಲ್ಲೆಯಲ್ಲಿ 2025 ರಲ್ಲಿ ಎಷ್ಟು ಜನರಿಗೆ ಹೃದಯಾಘಾತವಾಗಿದೆ: ಎಷ್ಟು ಜನ ಮರಣ ಹೊಂದಿದ್ದಾರೆ: (ತಾಲ್ಲೂಕುವಾರು ವಿವರ ನೀಡುವುದು) | ತುಮಕೂರು ಜಿಲ್ಲೆಯಲ್ಲಿ 2025 ರಲ್ಲಿ ಜುಲೈ-2025 ರ ಅಂತ್ಯಕ್ಕೆ ಒಟ್ಟು 525 ಜನರಿಗೆ ಹೃದಯಾಘಾತವಾಗಿರುತ್ತದೆ. ವಿವರಗಳು ಈ ಕೆಳಕಂಡಂತಿವೆ: |

**2025-26 ನೇಸಾಲಿನ STEMI ಕಾರ್ಯಕ್ರಮದ ವರದಿಗಳು**
**(ಜುಲೈ 2025 ರ ಅಂತ್ಯದ ವರೆಗೆ)**

| ಕ್ರ.ಸ | ಆಸ್ಪತ್ರೆಗಳವಿವರ | ಒಟ್ಟು ECG's | STEMI Critical ECG's |
|---|---|---|---|
| 1 | ಜಿಲ್ಲಾ ಆಸ್ಪತ್ರೆ-ತುಮಕೂರು | 8493 | 257 |
| 2 | ಸಾರ್ವಜನಿಕ ಆಸ್ಪತ್ರೆ-ಕೊರಟಗೆರೆ | 5680 | 60 |
| 3 | ಸಾರ್ವಜನಿಕ ಆಸ್ಪತ್ರೆ-ಸಿರಾ | 9224 | 159 |
| | ಸಾರ್ವಜನಿಕ ಆಸ್ಪತ್ರೆ- | | |

| | | | |
|---|---|---|---|
| 4 | ಮಧುಗಿರಿ | 3836 | 49 |
| Total | | **27233** | **525** |

ತುಮಕೂರು ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನ ಜುಲೈ -2025 ರ ಅಂತ್ಯಕ್ಕೆ ಒಟ್ಟು 16 ಜನ ಮರಣ ಹೊಂದಿದ್ದಾರೆ. ವಿವರಗಳು ಈ ಕೆಳಕಂಡಂತಿವೆ:

| ಹೃದಯಾಘಾತದಿಂದ ಮರಣ ಹೊಂದಿದವರ ವಿವರ | | | |
|---|---|---|---|
| ಕ್ರ.ಸ | ಜಿಲ್ಲೆ | ಆಸ್ಪತ್ರೆಗಳ ವಿವರ | 2025-26 ನೇ ಸಾಲಿನ (ಜುಲೈ 2025 ಅಂತ್ಯಕ್ಕೆ) |
| 1 | ತುಮಕೂರು | ಜಿಲ್ಲಾ ಆಸ್ಪತ್ರೆ - ತುಮಕೂರು | 6 |
| | | ಸಾರ್ವಜನಿಕ ಆಸ್ಪತ್ರೆ- ಕೊರಟಗೆರೆ | 2 |
| | | ಸಾರ್ವಜನಿಕ ಆಸ್ಪತ್ರೆ - ಸಿರಾ | 5 |
| | | ಸಾರ್ವಜನಿಕ ಆಸ್ಪತ್ರೆ- ಮಧುಗಿರಿ | 3 |
| **ಒಟ್ಟು** | | | **16** |

| | | |
|---|---|---|
| ಇ | ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಹೃದಯಾಘಾತಕ್ಕೆ ಚಿಕಿತ್ಸೆ ನೀಡಲು ಯಾವ ರೀತಿಯಲ್ಲಿ ಸಜ್ಜುಗೊಳಿಸಲಾಗಿದೆ; | ರಾಜ್ಯದಲ್ಲಿನ ಎಲ್ಲಾ ತಾಲ್ಲೂಕ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ಇ.ಸಿ.ಜಿ ಮಾಡಿ ತುರ್ತು ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡಲಾಗಿದೆ.<br><br>ಹೃದಯಕ್ಕೆ ಸಂಬಂಧಿಸಿದ ಡಾ. ಪುನೀತರಾಜಕುಮಾರ ಹೃದಯ ಜ್ಯೋತಿ ಯೋಜನೆ (STEMI) ಕಾರ್ಯಕ್ರಮವನ್ನು HUB and SPOKE Model ಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ,ಹೃದಯ ಸಂಬಂಧಿ ಖಾಯಿಲೆ ಪ್ರಕರಣಗಳಿಗೆ ಪ್ರಾಥಮಿಕ ಹಂತದಲ್ಲಿಯೇ ಚಿಕಿತ್ಸೆಯನ್ನು ನೀಡುತ್ತಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ತೃತೀಯ ಹಂತದ ಆಸ್ಪತ್ರೆಗಳಿಗೆ ಕಳುಹಿಸಲಾಗುತ್ತಿದೆ. |
| ಈ | ತುಮಕೂರು ಜಿಲ್ಲೆಯ ಎಷ್ಟು ತಾಲ್ಲೂಕು ಆಸ್ಪತ್ರೆಗಳಲ್ಲಿ ಸ್ಟೆಮಿ ಯೋಜನೆ ಜಾರಿಗೊಳಿಸಲಾಗಿದೆ; ಅವು ಯಾವುವು; ಜಿಲ್ಲೆಯ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಸ್ಟೆಮಿ ಯೋಜನೆ ಜಾರಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; ಕೈಗೊಳ್ಳದಿದಲ್ಲಿ, ಯಾವ ಕಾಲಮಿತಿಯಲ್ಲಿ ಕೈಗೊಳ್ಳುವುದು; | STEMI ಯೋಜನೆಯನ್ನು ತುಮಕೂರು ಜಿಲ್ಲೆಯ ಈ ಕೆಳಕಂಡ 4 ಆಸ್ಪತ್ರೆಗಳಲ್ಲಿ ಜಾರಿಗೊಳಿಸಲಾಗಿದೆ.<br><br>1. ಜಿಲ್ಲಾಆಸ್ಪತ್ರೆ ತುಮಕೂರು<br>2. ಸಾರ್ವಜನಿಕ ಆಸ್ಪತ್ರೆ ಕೊರಟಗೆರೆ<br>3. ಸಾರ್ವಜನಿಕ ಆಸ್ಪತ್ರೆ ಮಧುಗಿರಿ<br>4. ಸಾರ್ವಜನಿಕ ಆಸ್ಪತ್ರೆ ಶಿರಾ<br><br>ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ STEMI ಯೋಜನೆ ಜಾರಿಗೊಳಿಸಲು ಕ್ರಮವಹಿಸಲಾಗುತ್ತಿದೆ. |
| ಉ | ರಾಜ್ಯದಲ್ಲಿ ಇತ್ತೀಚೆಗೆ ಹೃದಯಾಘಾತ ಪ್ರಕರಣಗಳು ಹೆಚ್ಚಾಗುತ್ತಿದ್ದು ಸದರಿ ಪ್ರಕರಣಗಳನ್ನು ಸಮರ್ಥವಾಗಿ ನಿಭಾಯಿಸಲು ಆರೋಗ್ಯ ಇಲಾಖೆಯನ್ನು ಸರ್ಕಾರ ಯಾವ ರೀತಿಯಲ್ಲಿ ಸಜ್ಜುಗೊಳಿಸಲಾಗಿದೆ ? | ರಾಜ್ಯದಲ್ಲಿ ಹೆಚ್ಚುತ್ತಿರುವ ಹೃದಯಾಘಾತ ಮತ್ತು ಹೃದಯ ಸ್ತಂಭನ ಪ್ರಕರಣಗಳಿಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಈ ಕೆಳಕಂಡಂತೆ ಕ್ರಮ ವಹಿಸಲಾಗಿರುತ್ತದೆ.<br><br>1) ಗೃಹ ಆರೋಗ್ಯ ಯೋಜನೆ ಮೂಲಕ ಅಸಾಂಕ್ರಾಮಿಕ ರೋಗಗಳನ್ನು ಪತ್ತೆ ಹಚ್ಚಲು ಮತ್ತು ಹೃದಯಾಘಾತಕ್ಕೆ |

| | | |
|---|---|---|
| | | ಕಾರಣವಾದ ಅಪಾಯಕಾರಿ ಅಂಶಗಳನ್ನು ಪತ್ತೆ ಮಾಡಲು 30 ವರ್ಷ ಮೇಲ್ಪಟ್ಟವರಿಗೆ ತಪಾಸಣೆ ಮಾಡಲು ಕ್ರಮವಹಿಸಲಾಗಿರುತ್ತದೆ.<br><br>2) ಡಾ. ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ವಿಸ್ತರಿಸಲು ಕ್ರಮ ವಹಿಸಲಾಗುತ್ತಿದೆ.<br><br>3)ಶಾಲೆಗಳಲ್ಲಿ, ಜಿಮ್‌ಗಳಲ್ಲಿ, ಸಂಸ್ಥೆಗಳಲ್ಲಿ, ಸಾರ್ವಜನಿಕರಿಗೆ ಸಿ.ಪಿ.ಆರ್ ತರಬೇತಿ, ಜನಜಾಗೃತಿ ಹಾಗೂ ಆರೋಗ್ಯ ತಪಾಸಣೆ ಶಿಬಿರಗಳನ್ನು ಹಮ್ಮಿಕೊಳ್ಳಲು ಕ್ರಮವಹಿಸಲಾಗಿದೆ. |

**ಆಕುಕ 118 ಎಸ್‌ಎಂಎಂ 2025**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಸಚಿವರು**

| ಅನುಬಂಧ- 01 | | | | |
|---|---|---|---|---|
| ಡಾ ಪುನೀತ್ ರಾಜ್ಕುಮಾರ್ ಹೃದಯ ಜ್ಯೋತಿ ಯೋಜನೆ | | | | |
| ಹೃದಯಾಘಾತದಿಂದ ಮೃತಪಟ್ಟವರ ಜಿಲ್ಲಾವಾರು ಮತ್ತು ವರ್ಷವಾರು ಮಾಹಿತಿ | | | | |
| **SlNo** | **Disitrict** | **2023-24** | **2024-25** | **2025-26 (up to July 2025)** |
| 1 | Bengaluru Rural | 10 | 23 | 2 |
| 2 | Ramanagara | 12 | 32 | 8 |
| 3 | Chikkaballapura | 11 | 27 | 8 |
| 4 | Tumakuru | 44 | 63 | 16 |
| 5 | Kolar | 17 | 22 | 8 |
| 6 | Mysuru | 30 | 52 | 18 |
| 7 | Mandya | 27 | 30 | 8 |
| 8 | Hassan | 32 | 21 | 6 |
| 9 | Kodagu | 4 | 11 | 3 |
| 10 | Chamarajnagar | 8 | 9 | 3 |
| 11 | Bijapur | 1 | 1 | 0 |
| 12 | Kalaburgi | 18 | 14 | 4 |
| 13 | Bidar | 3 | 11 | 7 |
| 14 | Yadgiri | 11 | 11 | 5 |
| 15 | Raichur | 1 | 5 | 1 |
| 16 | Dakshina Kannada | 0 | 33 | 6 |
| 17 | Udupi | 0 | 17 | 2 |
| 18 | Shivamogga | 0 | 10 | 6 |
| 19 | Chikkamagaluru | 0 | 20 | 6 |
| 20 | Dharwad | 0 | 39 | 6 |
| 21 | Uttara Kannada | 0 | 14 | 3 |
| 22 | Gadag | 0 | 8 | 2 |
| 23 | Davangere | 0 | 7 | 2 |
| 24 | Haveri | 0 | 27 | 3 |
| 25 | Chitradurga | 0 | 22 | 4 |
| 26 | Belagavi | 0 | 24 | 8 |
| 27 | Bagalkote | 0 | 10 | 5 |
| 28 | Koppal | 0 | 3 | 3 |
| 29 | Bellary | 0 | 8 | 4 |
| 30 | Vijayanagara | 0 | 34 | 10 |
| **Total** | | **229** | **608** | **167** |

ಉಪ ನಿರ್ದೇಶಕರು,
ರಾಜ್ಯ ಎನ್.ಸಿ.ಡಿ. ಘಟಕ
ನೆಲಮಹಡಿ-ಪೂರ್ವ ಭಾಗ, ಆ ಮತ್ತು ಕು.ಕ. ಸೇವ
ಆರೋಗ್ಯ ಸೌಧ, 1ನೇ ಅಡ್ಡರಸ್ತೆ, (ಕುಷ್ಠರೋಗ ಆಸ್ಪತ್ರೆ ಆ
ಮಾಗಡಿ ರಸ್ತೆ, ಬೆಂಗಳೂರು – 560 02